ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE : 11/03/2020


# ಕರೋನಾಗಿಂತ ಸಿಎಎ ಎನ್‌ಆರ್‌ಸಿ ಮಾರಕ

ವಿಧಾನಪರಿಷತ್: ಕರೋನಾ ವೈರಸ್‌ಗಿಂತ ಸಿಎಎ, ಎನ್‌ಆರ್‌ಸಿ ಪ್ರಕ್ರಿಯೆಗಳು ಮಾರಕವಾಗಿದ್ದು, ಜನರಲ್ಲಿ ಆತಂಕ ಮನೆ ಮಾಡಿದೆ ಎಂದು ವಿಧಾನಪರಿಷತ್ ಸದಸ್ಯೆ ಜಯಮಾಲಾ ಹೇಳಿದರು.



ಮಂಗಳವಾರ ವಿಧಾನ ಪರಿಷತ್‌ನಲ್ಲಿ ಭಾರತ. ಸಂವಿಧಾನದ ಮೇಲಿನ ವಿಶೇಷ ಚರ್ಚೆಯಲ್ಲಿ ಅವರು ಮಾತನಾಡಿದರು. ಕರೋನಾ ವೈರಸ್.ಬಗ್ಗೆ ಆತಂಕ ಇರುವಂತೆ, ಹತ್ತುಪಟ್ಟು ಹೆಚ್ಚು ಎನ್‌ಆರ್‌ಸಿ ಬಗ್ಗೆ ಇದೆ. ಇದರಲ್ಲಿ ಪ್ರಮುಖವಾಗಿ ಜನನ ಪ್ರಮಾಣ ಪತ್ರ ಸಲ್ಲಿಸಬೇಕೆಂದು ಹೇಳಲಾಗುತ್ತದೆ. ಆದರೆ, ಕೋಟ್ಯಂತರ ಜನರ ಬಳಿ ಈ ದಾಖಲೆಗಳಿಲ್ಲ. ಆದರೂ ಸರಕಾರ ಹಠಕ್ಕೆ ಬಿದ್ದು, ಅದನ್ನು ಜಾರಿಗೆ ಮುಂದಾಗಿದೆ ಎಂದರು.

ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಹೋರಾಟ, ಜೆಪಿ ಚಳವಳಿ ಹಾಗೂ ಸಿಎಎ, ಎನ್‌ಆರ್‌ಸಿ ವಿರುದ್ಧ ನಡೆಯುತ್ತಿರುವ ಹೋರಾಟಗಳು ಪ್ರಮುಖವಾದದ್ದು, ಈ ಹೋರಾಟಕ್ಕೆ ಯಾರು ನಾಯಕರಿಲ್ಲ. ಆದರೂ, ಸ್ವಯಂ ಪ್ರೇರಿತವಾಗಿ ಜನರು ಬೀದಿಗಿಳಿದು, ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿರುವುದು ಇತಿಹಾಸವೇ ಸೃಷ್ಟಿಯಾಗಿದೆ. ಆಧಾರ್ ಮತ್ತು ಮತದಾನ ಗುರುತಿನ ಚೀಟಿ ದಾಖಲೆಗಳಲ್ಲ ಎಂದು ಹೇಳುವುದು ಸರಿಯಲ್ಲ, ದೇಶದ 9 ರಾಜ್ಯಗಳು ಸಿಎಎ ವಿರುದ್ಧವಾಗಿದೆ. ಇದೇ ಮಾದರಿ ಕರ್ನಾಟಕದಲ್ಲಿ ಬರಬೇಕು. ಅಲ್ಲದೆ, ಅಸ್ಸಾಂನಲ್ಲಿ ನಡೆದಂತೆ ಎನ್‌ಆರ್‌ಸಿ ರಾಜ್ಯದಲ್ಲಿ ನಡೆಯುವುದು ಬೇಡ ಎಂದು ಒತ್ತಾಯಿಸಿದರು.

ಒಂದು ಧರ್ಮವನ್ನು ಗುರಿಯಾಗಿಸಿಕೊಂಡು ಕಾನೂನು ಮಾಡಲಾಗಿದೆ.ಅಲ್ಲದೆ, ಏಪ್ರಿಲ್‌ನಲ್ಲಿ ಎನ್‌ಆರ್‌ಸಿ ಪ್ರಕ್ರಿಯೆ ನಡೆಯಲಿದ್ದು, ಒಂದು ವೇಳೆ ನಮ್ಮ ದಾಖಲೆ ಸಾಬೀತು ಆಗಿಲ್ಲ ಎಂದರೆ ಬಂಧನ ಕೇಂದ್ರ ಇಡುತ್ತಾರೆ ಎನ್ನುವ ಸುದ್ದಿ ಹರಿದಾಡುತ್ತಿದೆ. ಇದನ್ನೆಲ್ಲಾ ಸರಕಾರ ಗಂಭೀರವಾಗಿ ಪರಿಗಣಿಸಿ, ಸೂಕ್ತ ಭರವಸೆ ನೀಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಮಧ್ಯಪ್ರವೇಶಿಸಿದ ಬಿಜೆಪಿ ಸದಸ್ಯೆ ತೇಜಸ್ವಿನಿ, ಬಂಧನ ಕೇಂದ್ರ ಎನ್ನುವುದು ಇಲ್ಲ. ಎಲ್ಲಿದೆ ಎಂದು ಮಾಜಿ ಸಚಿವೆ ಸದನಕ್ಕೆ ಮಾಹಿತಿ ನೀಡಬೇಕೆಂದರು. ಇದಕ್ಕೆ ಉತ್ತರಿಸಿದ ಜಯಮಾಲಾ, ನಿಮ್ಮ ಸರಕಾರದ ಬಳಿಯೇ ಮಾಹಿತಿ ಇದೆ. ಅಲ್ಲದೆ, ಬಂಧನ ಕೇಂದ್ರ ಎನ್ನುವುದು ಪ್ರತಿಯೊಂದು ದೇಶದಲ್ಲಿದೆ ಎಂದರು.

ನನ್ನ ಬಾಲ್ಯ ಎಲ್ಲವೂ ಚಿಕ್ಕಮಗಳೂರಿನಲ್ಲಿ ಕಳೆದೆ. ಶಾಲೆ ಸೇರುವಾಗ ನಮ್ಮ ಅಪ್ಪ ಬರ್ಕ್‌ಲಿ ಸಿಗರೇಟ್ ಪ್ಯಾಕ್ ಮೇಲೆ ನನ್ನ ಜನ್ಮ ದಿನ ಬರೆದು, ಕಳುಹಿಸಿದ್ದರು. ಆದರೆ, ಈಗ ನನ್ನ ಅಪ್ಪ, ಅಜ್ಜನ ಜನನ ಪ್ರಮಾಣ ಎಲ್ಲಿಂದ ತೆಗೆದುಕೊಂಡು ಬರುವುದು ಎಂದು ಪ್ರಶ್ನಿಸಿದರು.